**<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>**

C.C No.62/2017
CW-8 PW-2

ಹೆಸರು : ಷರೀಪ್ ಕೋಡ್ಲಿ

ತಂದೆ ಹೆಸರು : ಬಷೀರ ಮಿಯ್ಯಾ

ವಯಸ್ಸು : 36 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸ ಸ್ಥಳ : ಗುಂಡಗುರ್ತಿ, ತಾ: ಚಿತ್ತಾಪೂರ.

---

**<u>ಪ್ರಮಾಣವಚನ ಭೋಧಿಲಾಯಿತು. ದಿಃ 02.07.2024</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>**

ನನಗೆ ಚಾಸಾ-1 ರವರ ಪರಿಚಯ ಇರುತ್ತದೆ. ನನಗೆ ಚಾಸಾ-2 ರಿಂದ 7 ರವರ ಪರಿಚಯ ಇರುವುದಿಲ್ಲ. ನನಗೆ ಈ ಪ್ರಕರಣದ ಆರೋಪಿಯನ್ನು ನೋಡಿದರೆ ಗುರುತಿಸಲು ಆಗುವುದಿಲ್ಲ.

2016 ನೇ ಇಸ್ವಿಯಲ್ಲಿ ಒಂದು ದಿನ ಗುಂಡಗುರ್ತಿಯಲ್ಲಿ ಒಂದು ಸಮ್ಮೇಳನ ಇರುವಾಗ, ನಾನು ಸದರಿ ಸಮ್ಮೇಳನಕ್ಕೆ ಹಾಜರಾಗಿದ್ದು, ಆ ಸಂದರ್ಭದಲ್ಲಿ ಮೃತ ಶಂಕರ ಹಾಗೂ ಇನ್ನೊಬ್ಬ ಆತನ ಗೆಳೆಯ ಸದರಿ ಕಾರ್ಯಕ್ರಮ ಮುಗಿಸಿಕೊಂಡು ಅವರ ಊರಿಗೆ ಹೋಗಿದ್ದರು. ಸದರಿ ದಿನ ರಾತ್ರಿ ಚಾಸಾ-1 ರವರು ನನಗೆ ಕರೆಮಾಡಿ ಕಾರ್ಯಕ್ರಮ ಮುಗಿಸಿಕೊಂಡು ವಾಪಸ್ಸು ಹೋಗಿದ್ದರ ಬಗ್ಗೆ ಕೇಳಲಾಗಿ ನಾನು ಚಾಸಾ-1 ರವರಿಗೆ ಸದರಿ ಶಂಕರ ರವರು ಆತನ ಗೆಳೆಯನೊಂದಿಗೆ ಊರಿಗೆ ವಾಪಸ್ಸು ಹೋಗಿದ್ದರ ಬಗ್ಗೆ ನಾನು ತಿಳಿಸಿದೆನು.

ನಂತರ ನನಗೆ ಮರುದಿನ ಬೆಳಿಗ್ಗೆ ಸದರಿ ಶಂಕರ ಈತನಿಗೆ ಅಪಘಾತ ಆಗಿದ್ದರ ಬಗ್ಗೆ ತಿಳಿದು ಗುಂಡಗುರ್ತಿಯ ಬಳಿ ಇರುವ VKG ಕಂಕರ ಮಷಿನ ಬಳಿ ಹೋಗಿ ನೋಡಲಾಗಿ ಅಪಘಾತ ಆದ ವಿಷಯ ನಿಜವಾಗಿತ್ತು. ಸದರಿ ಶಂಕರ ಮತ್ತು ಆತನ ಗೆಳೆಯ ಇಬ್ಬರು ಮೃತಪಟ್ಟಿದ್ದರು. ನಾನು ಸದರಿ ವಿಷಯದ ಬಗ್ಗೆ ಚಾಸಾ-1 ರವರಿಗೆ ವಿಷಯವನ್ನು ತಿಳಿಸಿರುತ್ತೇನೆ.

ಪೊಲೀಸರು ಈ ಪ್ರಕರಣದಲ್ಲಿ ನನ್ನ ವಿಚಾರಣೆಯನ್ನು ಮಾಡಿರುತ್ತಾರೆ. ಪೊಲೀಸರು ಯಾವತ್ತು ನನಗೆ ಪೊಲೀಸ ಠಾಣೆಗೆ ಕರೆಯಿಸಿರಲಿಲ್ಲ, ಮತ್ತು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

(ಮಾನ್ಯ ಸ ಸ ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು

ದಾಖಲೆಗಳನ್ನು ಪರಿಶೀಲಿಸಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅಭಿಯೋಜಕರವರಿಂದ**

ದಿನಾಂಕ: 07-10-2016 ರಂದು ಮೃತ ಶಂಕರ ಗ್ರಾಮ ಪಂಚಾಯತಿ ಸದಸ್ಯರಾದ ವಿಶ್ವನಾಥ ಇವರು ಗುಂಡಗುರ್ತಿಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ ಸಭೆಗೆ ಬಂದಿದ್ದರು ಎಂದರೆ ಸರಿ. ಸದರಿ ದಿನ ಶಂಕರರಾವ ಮತ್ತು ವಿಶ್ವನಾಥ ಇಬ್ಬರು ವಿಶ್ವನಾಥ ಈತನ ಮೋಟಾರ ಸೈಕಲ ಸಂಖ್ಯೆ: KA-25/Q-8552 ನೇದ್ದರಲ್ಲಿ ಬಂದಿದ್ದರು ಎಂದರೆ ಸರಿ. ಸದರಿ ಶಂಕರರಾವ ಮತ್ತು ವಿಶ್ವನಾಥ ಇಬ್ಬರು 7-00 ಗಂಟೆವರೆಗೆ ಸಭೆಗೆ ಹಾಜರಾಗಿ ನಂತರ ಅವರ ಊರಿಗೆ ಹೋಗುವುದಾಗಿ ಹೇಳಿ ಹೋಗಿರುತ್ತಾರೆಂದರೆ ಸರಿ. ರಾತ್ರಿ 11-00 ಗಂಟೆ ಸಮಯಕ್ಕೆ ಚಾಸಾ-1 ರವರು ನನಗೆ ಕರೆ ಮಾಡಿರುತ್ತಾರೆ ಎಂದರೆ ಸರಿ. ನಾನು ಸದರಿಯವರಿಗೆ ಶಂಕರರಾವ ಹಾಗೂ ಆತನ ಸ್ನೇಹಿತ ಊರಿಗೆ ವಾಪಸ್ಸ ಹೋಗಿರುವುದಾಗಿ ತಿಳಿಸಿರುತ್ತೇನೆ ಎಂದರೆ ಸರಿ.

ದಿನಾಂಕ: 23.12.2016 ರಂದು ಪೊಲೀಸರು ನನಗೆ ಈ ಪ್ರಕರಣದ ಆರೋಪಿಯನ್ನು ತೋರಿಸಿ, ಅಪಘಾತವನ್ನು ಸದರಿ ಆರೋಪಿಯೇ ಮಾಡಿದ್ದಾನೆಂದು ನನಗೆ ಹೇಳಿ, ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ದಿನಾಂಕ: 23-12-2016 ರಂದು ಒಂದು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು.

ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್.ಎನ್.ಪಿ. ವಕೀಲರಿಂದ - ಏನು ಇಲ್ಲಾ**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,

ಚಿತ್ತಾಪೂರ.